ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 241
2. ಸದಸ್ಯರ ಹೆಸರು : ಶ್ರೀ ಕೆ.ಎ.ತಿಪ್ಪೇಸ್ವಾಮಿ
3. ಉತ್ತರಿಸಬೇಕಾದ ದಿನಾಂಕ : 17.02.2022.
4. ಉತ್ತರಿಸುವವರು : ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಸಣ್ಣ ನೀರಾವರಿ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
ಅ.	ರಾಜ್ಯದಲ್ಲಿ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆ ವಿನಿಯಮನ ಹಾಗೂ ನಿಯಂತ್ರಣ ಅಧಿನಿಯಮಕ್ಕೆ ಇತ್ತೀಚೆಗೆ ತಂದಿರುವ ತಿದ್ದುಪಡಿಗಳು ಯಾವುವು; (ಪೂರ್ಣ ವಿವರ ನೀಡುವುದು)	ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆ ವಿನಿಯಮನ ಹಾಗೂ ನಿಯಂತ್ರಣ ಅಧಿನಿಯಮ-2011ಕ್ಕೆ ಇತ್ತೀಚೆಗೆ ಯಾವುದೇ ತಿದ್ದುಪಡಿಗಳನ್ನು ತಂದಿರುವುದಿಲ್ಲ.
ಆ.	ರಾಜ್ಯದಲ್ಲಿ ಭೂ ವಿಜ್ಞಾನ ಇಲಾಖೆಯಿಂದ ಅಂತರ್ಜಲ ವಿಭಾಗವನ್ನು ಬೇರ್ಪಡಿಸಿದ ನಂತರ ಹೊಸದಾಗಿ ಕೈಗೊಂಡಿರುವ ಕ್ರಮಗಳೇನು; (ಪೂರ್ಣ ವಿವರ ನೀಡುವುದು)	ವಿವರಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ.
ಇ.	ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಕಲ್ಯಾಣ ಕರ್ನಾಟಕ ವಿಭಾಗಗಳಿಗೆ ಸಂಬಂಧಪಟ್ಟಂತೆ ಬೇರೆ ನಿಯಮಗಳನ್ನು ರೂಪಿಸಲಾಗಿದೆಯೇ; ಹಾಗಿದ್ದಲ್ಲಿ ಪೂರ್ಣ ವಿವರ ನೀಡುವುದು:	ಕರ್ನಾಟಕ ಅಂತರ್ಜಲ (ಅಭಿವೃದ್ಧಿ ಮತ್ತು ನಿರ್ವಹಣೆಯ ವಿನಿಯಮನ ಹಾಗೂ ನಿಯಂತ್ರಣ) ಅಧಿನಿಯಮ 2011 ಮತ್ತು ನಿಯಮಾವಳಿ 2012ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಕಲ್ಯಾಣ ಕರ್ನಾಟಕ ವಿಭಾಗಗಳಿಗೆ ಸಂಬಂಧಪಟ್ಟಂತೆ ಬೇರೆ ಬೇರೆ ನಿಯಮಗಳನ್ನು ರೂಪಿಸಿರುವುದಿಲ್ಲ.
ಈ.	ರಾಜ್ಯ ಸರ್ಕಾರಕ್ಕೆ ಅಂತರ್ಜಲ ಅಭಿವೃದ್ಧಿಗೆ ಕಳೆದ 5 ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ದೊರೆತಿರುವ ಅನುದಾನವೆಷ್ಟು; ಮತ್ತು ಅನುದಾನವನ್ನು ಹೇಗೆ ಬಳಸಿಕೊಳ್ಳಲಾಗಿದೆ? (ಜಿಲ್ಲಾವಾರು ಪೂರ್ಣ ಮಾಹಿತಿ ನೀಡುವುದು)	ಸಮುದಾಯ ಸಹಭಾಗಿತ್ವದಲ್ಲಿ ಅಂತರ್ಜಲ ನಿರ್ವಹಣೆಗಾಗಿ ಅಟಲ್ ಭೂ ಜಲ ಯೋಜನೆಯು ರಾಜ್ಯದ 14 ಜಿಲ್ಲೆಗಳಲ್ಲಿ 41 ತಾಲ್ಲೂಕುಗಳಲ್ಲಿನ 1199 ಗ್ರಾಮ ಪಂಚಾಯತಿಗಳಲ್ಲಿ ಅನುಷ್ಠಾನಗೊಂಡಿರುತ್ತದೆ. ಸದರಿ ಯೋಜನೆಯಡಿ ಪ್ರಸ್ತುತ ಗ್ರಾಮ ಪಂಚಾಯತಿವಾರು ಜಲ ಭದ್ರತಾ ಯೋಜನೆಯನ್ನು ತಯಾರಿಸುವ ಕಾರ್ಯಪ್ರಗತಿಯಲ್ಲಿದೆ. ಅಟಲ್ ಭೂ ಜಲ ಜಲ ಯೋಜನೆಯಡಿ ಪ್ರೋತ್ಸಾಹ ಧನ ಘಟಕದಲ್ಲಿ 2020-2021 ಸಾಲಿನ ರೂ.9.42 ಕೋಟಿ ಹಾಗೂ 2021-2022 ಸಾಲಿಗೆ ರೂ.5.72 ಕೋಟಿ ಒಟ್ಟು ರೂ.15.15 ಕೋಟಿ ಬಿಡುಗಡೆಯಾಗಿರುತ್ತದೆ. ಗ್ರಾಮ ಪಂಚಾಯತಿ ವಾರು ಸಿದ್ಧ ಪಡಿಸಿದಂತಹ ಜಲ ಭದ್ರತಾ ಯೋಜನೆಯಲ್ಲಿ ಪ್ರಸ್ತಾಪಿಸಿರುವ ನೀರಿನ ಮಿತಬಳಕೆ ಹಾಗೂ ನೀರಿನ ಸಂರಕ್ಷಣೆ ಕಾಮಗಾರಿಗಳಿಗೆ ಸಂಬಂಧ ಪಟ್ಟ ಪಾಲುದಾರ ಇಲಾಖೆಗಳ ಮುಖಾಂತರ ಅನುದಾನವನ್ನು ಬಿಡುಗಡೆಗೊಳಿಸಲಾಗುವುದು.

ಕಡತ ಸಂಖ್ಯೆ: ಎಂ ಐ ಡಿ/15/ಎಲ್‌ಸಿಕ್ಯೂ/2022

(ಜೆ.ಸಿ.ಮಾಧುಸ್ವಾಮಿ)
ಕಾನೂನು, ಸಂಸದೀಯ ವ್ಯವಹಾರಗಳು
ಮತ್ತು ಶಾಸನ ರಚನೆ ಹಾಗೂ
ಸಣ್ಣ ನೀರಾವರಿ ಸಚಿವರು.

ಅನುಬಂಧ-1

1. ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಅಂತರ್ಜಲ ಅನ್ವೇಷಣೆ ಘಟಕ ಜಿಲ್ಲಾ ಪಂಚಾಯಿತಿಯಿಂದ ಅಂತರ್ಜಲ ನಿರ್ದೇಶನಾಲಯ ಸ್ಥಾಪನೆಗೊಂಡಿರುತ್ತದೆ. ಪ್ರತೀ ಜಿಲ್ಲೆಗೆ ಒಂದು ಜಿಲ್ಲಾ ಅಂತರ್ಜಲ ಕಛೇರಿಯನ್ನು ಕಾರ್ಯಾರಂಭಗೊಳಿಸಿದೆ.
2. ರಾಜ್ಯದಾದ್ಯಂತ ಅಂತರ್ಜಲ ನಿರ್ದೇಶನಾಲಯದ ವತಿಯಿಂದ್ದ ಪ್ರತಿ ಮಾಹೆಯಾನ ಒಟ್ಟು 1757 ಅಧ್ಯಯನ ಬಾವಿ / ಕೊಳವೆಬಾವಿಗಳನ್ನು ಮ್ಯಾನುಯಲಿ(Manually) ಮಾಪನ ಮಾಡಲಾಗುತ್ತಿತ್ತು, ಆದರೆ 1245 ಅಧ್ಯಯನ ಕೊಳವೆಬಾವಿಗಳಿಗೆ DWLR With Telemetry ಉಪಕರಣಗಳನ್ನು ಹಂತ ಹಂತವಾಗಿ ಅಳವಡಿಸಲು ವಿವಿಧ ಯೋಜನೆಗಳಲ್ಲಿ ಅಳವಡಿಸಲು ಕ್ರಮವಹಿಸಲಾಗುತ್ತಿದೆ.
3. ಪ್ರತಿ ಮಾಹೆಯಾನ ಅಂತರ್ಜಲ ನಿರ್ದೇಶನಾಲಯವು ಹೊಂದಿರುವ ಅಧ್ಯಯನ ಬಾವಿ / ಕೊಳವೆಬಾವಿಗಳಲ್ಲಿ ಮಾಪನ ಮಾಡಲಾಗುವ ಜಲಮಟ್ಟದ ದತ್ತಾಂಶವನ್ನು ಆಧುನಿಕ ತಂತ್ರಜ್ಞಾನವಾದ ಆನ್‌ಲೈನ್ GWDES ಸಿಸ್ಟಮ್‌ನಲ್ಲಿ ಅಳವಡಿಸಲಾಗುತ್ತಿದೆ. ಹಾಗೂ ಕಳೆದ ಮೂರು ದಶಕಕ್ಕೂ ಹೆಚ್ಚಿನ ದತ್ತಾಂಶವನ್ನು ಸದರಿ ತಂತ್ರಾಂಶದಲ್ಲಿ ಅಳವಡಿಸಲಾಗುತ್ತಿದೆ.
4. ಅಂತರ್ಜಲ ವಾಣಿಜ್ಯ ಬಳಕೆಗೆ ನಿರಾಕ್ಷೇಪಣಾ ಪತ್ರ ನೀಡಲು ಆನ್‌ಲೈನ್ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಆನ್‌ಲೈನ್ ಮೂಖಾಂತರ NOC ನೀಡಲಾಗುತ್ತಿದೆ.
5. ಅಂತರ್ಜಲ ನಿರ್ದೇಶನಾಲಯದಿಂದ ಕೊಳವೆಬಾವಿ ಕೊರೆಯಲು ನೀಡುವ ತಾಂತ್ರಿಕ ಸಲಹೆಗಳನ್ನು ನೀಡುವ ಸೇವೆಯನ್ನು ಸೇವಾ ಸಿಂಧು ತಂತ್ರಾಂಶದಡಿಯಲ್ಲಿ ಸಾರ್ವಜನಿಕರಿಗೆ ಆನ್‌ಲೈನ್ ಮುಖಾಂತರ ಸೇವೆ ನೀಡಲಾಗುತ್ತಿದೆ.
6. ರಾಜ್ಯದಲ್ಲಿ ಅಂತರ್ಜಲ ಸಂಪನ್ಮೂಲ ಅನ್ವೇಷಣೆಯಲ್ಲಿ ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಅಂತರ್ಜಲ ಲಭ್ಯತಾ ನಕ್ಷೆಗಳನ್ನು ತಯಾರಿಸುವ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ರೂಪಿಸಲಾಗುತ್ತಿದೆ.
7. ಅಂತರ್ಜಲ ನಿರ್ದೇಶನಾಲಯಕ್ಕೆ ಆಧುನಿಕ ಉಪಕರಣಗಳನ್ನು ಮತ್ತು ತಾಂತ್ರಿಕ ಅಧಿಕಾರಿಗಳಿಗೆ ಹೊರ ರಾಜ್ಯ ಮತ್ತು ಹೊರದೇಶ (Netherland) ದಲ್ಲಿ ತರಬೇತಿಯನ್ನು ನೀಡಲಾಗಿರುತ್ತದೆ.